# ಸಲ್ಮಾನ್ ಕಸರತ್ತು



ಬಾಲಿವುಡ್ ಹೀರೋಗಳ ಪೈಕಿ ಆದಾಯ ಹೆಚ್ಚಿರೋರಲ್ಲಿ ಸಲ್ಮಾನ್ ಖಾನ್ ಮುಂಚೂಣಿಯಲ್ಲಿ ಇರುವುದು ನಿಜವೇ. ಆತನ ಇತ್ತೀಚಿನ ಎಲ್ಲ ಸಿನಿಮಾಗಳೂ ಮೊದಲ ವಾರದಲ್ಲೇ ನೂರು ಕೋಟಿ ರೂಪಾಯಿ ಕಲೆಕ್ಷನ್ ಗಡಿ ದಾಟುವುದು ಸಾಮಾನ್ಯ. ಆದರೆ 'ಜೈ ಹೋ' ಮಾತ್ರ ನಿರೀಕ್ಷೆಯಂತೆ ವೇಗವಾಗಿ ಕಲೆಕ್ಷನ್ ಮಾಡಲಿಲ್ಲ. ಸಲ್ಮಾನ್ ಖಾನ್ ಗುಜರಾತಿಗೆ ಹೋಗಿ ನರೇಂದ್ರ ಮೋದಿಯ ಜತೆ ಕೈಕುಲುಕಿ ಗಾಳಿಪಟ ಹಾರಿಸಿದ್ದರಿಂದ ಸಲ್ಲೂ ಅಭಿಮಾನಿಗಳು ಸಿಟ್ಟಾದದ್ದೇ ಇದಕ್ಕೆ ಮುಖ್ಯ ಕಾರಣ ಎನ್ನುವುದು ಒಂದು ವಾದ.

ಅಭಿಮಾನಿಗಳ ಸಿಟ್ಟನ್ನು ತಣಿಸಲೆಂದೇ ಆ ಬಳಿಕ ಸಲ್ಮಾನ್ ಖಾನ್ ಬಹಿರಂಗ ಹೇಳಿಕೆ ನೀಡಿ, 'ಕಾಂಗ್ರೆಸ್‌ನಲ್ಲೂ ನನ್ನ ಕೆಲವು ಗೆಳೆಯರಿದ್ದಾರೆ. ಅವರಲ್ಲಿ ಕೆಲವರ ಪರ ಪ್ರಚಾರ ಮಾಡುತ್ತೇನೆ' ಎಂದದ್ದೂ ಸುದ್ದಿಯಾಯಿತು. ಇದೇನೇ ಇದ್ದರೂ, ಮಾಧ್ಯಮಗಳಲ್ಲಿ ಸಲ್ಮಾನ್‌ಗೆ ಇರುವುದಕ್ಕಿಂತ ಹೆಚ್ಚಿನ ಕ್ರೆಡಿಬಿಲಿಟಿ ಇರುವುದು ಅಮೀರ್ ಖಾನ್‌ಗೆ. ಅದಕ್ಕೆ ಅಮೀರ್ ಖಾನ್‌ಗೆ ಇರುವ ಸಾಮಾಜಿಕ ಕಾಳಜಿಯೇ ಮುಖ್ಯ ಕಾರಣ. ಅದರಲ್ಲೂ ಅಮೀರ್ ಖಾನ್ ಇತ್ತೀಚೆಗೆ ಟೀವಿ ಯಲ್ಲಿ ನಡೆಸಿಕೊಡುತ್ತಿರುವ 'ಸತ್ಯಮೇವ ಜಯತೇ' ಆತನಿಗೆ ಹೆಚ್ಚು ಜನಪ್ರಿಯತೆ ಮತ್ತು ಕೀರ್ತಿ ತಂದುಕೊಟ್ಟಿದೆ. ಈ ಷೋ ನಡೆಸಲು ಅಮೀರ್‌ಖಾನ್ ಸಂಭಾವನೆ ತೆಗೆದುಕೊಳ್ಳುತ್ತಿಲ್ಲ ಎನ್ನುವುದು ಆತನ ಇನ್ನೊಂದು ಹೆಚ್ಚುಗಾರಿಕೆ.

ಅಮೀರನಂತೆಯೇ ಸಾಮಾಜಿಕ ಮನ್ನಣೆ ಗಳಿಸಲೆಂದೇ ಸಲ್ಮಾನ್ ಖಾನ್ ಕಲರ್ಸ್ ಟೀವಿ ಚಾನೆಲ್‌ನ ಹೊಸ ಷೋ ಒಪ್ಪಿಕೊಂಡಿದ್ದಾನೆ. 'ಮಿಶನ್ ಸಪ್ನೇ' ಎನ್ನುವ ಈ ಷೋನಲ್ಲಿ ಸಲ್ಮಾನ್ ಖಾನ್ ಒಂದು ದಿನದ ಮಟ್ಟಿಗೆ ಯಾವುದೋ ಜನಸಾಮಾನ್ಯರ ವೃತ್ತಿಯನ್ನು ಮಾಡಿ ಹಣ ಗಳಿಸುತ್ತಾನಂತೆ. ಅದನ್ನು ಟೀವಿ ಯಲ್ಲಿ ಪ್ರಸಾರ ಮಾಡಿದಾಗ ಬರುವ ಜಾಹೀರಾತಿನ ಹಣವನ್ನು ದತ್ತಿ ಉದ್ದೇಶಕ್ಕೆ ದಾನ ಮಾಡುತ್ತಾನಂತೆ. ಇತ್ತೀಚೆಗೆ ಈ ಕಾರ್ಯಕ್ರಮಕ್ಕಾಗಿಯೇ ಸಲ್ಮಾನ್ ಖಾನ್ ಕ್ಷೌರಿಕನ ಅಂಗಡಿಯೊಂದರಲ್ಲಿ ಗ್ರಾಹಕನೊಬ್ಬನಿಗೆ ಕ್ಷೌರ ಮಾಡಿದ್ದಾನೆ. ಹಾಗೆಯೇ ಬ್ಯೂಟಿ ಪಾರ್ಲರ್‌ನಲ್ಲಿ ಮಹಿಳೆಯೊಬ್ಬರ ಕೈಗೆ ಮಸಾಜ್ ಮಾಡಿದ್ದಾನೆ! ಈ ಸುದ್ದಿ ಕೇಳಿದ ಅಮೀರ್‌ಖಾನ್, 'ತುಂಬ ಸಂತೋಷ. ಬೇರೆ ಹೀರೋಗಳೂ ಹೀಗೆ ಸಾಮಾಜಿಕ ಕಾಳಜಿ ಮೆರೆಯಲಿ' ಎಂದು ಹಾರೈಸಿದ್ದಾನೆ!

